<u>ಸಾಕ್ಷಿಯನ್ನು ದಿನಾಂಕಃ**22.01.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ.ಎನ್.ಎಸ್.ಕೆ. ವಕೀಲರಿಂದ:</u>

ನಾನು ಚಿಕ್ಕೋನಹಳ್ಳಿ ಗ್ರಾಮಕ್ಕೆ ತಿಂಗಳಿಗೆ 4 ಬಾರಿ ಬಂದು ನನ್ನ ಮನೆಯಲ್ಲಿಯೇ ವಾಸ್ತವ್ಯ ಹೂಡಿ ಹೋಗುತ್ತೇನೆ. ದಾವಾ ಚೆಕ್ಕು ಬಂದಿಯನ್ನು ಪಾರೀಕತ್ ನೋಡಿ ನಮೂದಿಸಿರುತ್ತೇನೆ. ನಿಪಿ.1 ರಂತೆ ನಾಗರಾಜುರವರಿಗೆ 2 ಎಕರೆ 35 ಗುಂಟೆ ಆಸ್ತಿ ಬಂದಿರುತ್ತದೆ. ದಾವಾ ಆಸ್ತಿಯ ಚೆಕ್ಕು ಬಂದಿ ಪಾರೀಕತ್ ನಂತೆ ನೋಡಿ ಬರೆಸಿದ್ದರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿಯು ಅದರ ನಕಲು ಪ್ರತಿ ನನ್ನ ಬಳಿ ಇದೆ ಎಂದು ನುಡಿಯುತ್ತಾರೆ. ಸದರಿ ಪಾರೀಕತ್ 1 ನೇ ಪ್ರತಿವಾದಿಯ ಬಳಿ ಇರುವ ಕುರಿತು ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ . ನನ್ನ ಕ್ರಯಪತ್ರ ಮಾಡಿಕೊಳ್ಳುವ ಸಮಯದಲ್ಲಿ ಪಾರೀಕತ್ ನ ನಕಲನ್ನು ನೋಡಿ ಮಾಡಿಕೊಂಡಿದ್ದೇವೆ.

1 ನೇ ಪ್ರತಿವಾದಿಗೆ ಕಣ್ಣು ಕಾಣುವುದಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿಯು ಶರೀಕಾಗಿ 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದ ಆಸ್ತಿಯನ್ನು ಕಬಳಿಸಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದ ಆಸ್ತಿಯಲ್ಲಿ ಅವರೇ ಬೋರ್ ಹಾಕಿಸಿ ಅವರೇ

ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸಲು ನಾನು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿಲ್ಲದಿದ್ದರೂ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪಾರೀಕತ್ ನ ಮೂಲ ದಾಖಲೆಗಳು ನನ್ನ ಅಥವಾ 2 ನೇ ಪ್ರತಿವಾದಿಯ ಬಳಿ ಇದ್ದರೂ 1 ನೇ ಪ್ರತಿವಾದಿಯ ಬಳಿ ಇದೆ ಎಂದು ಈಗ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದು, ಆತ ಹುಟ್ಟುಕುರುಡನಾಗಿದ್ದು ದಾವೆಯಲ್ಲಿ ತೋರಿಸಿರುವ ವಾಜ್ಯ ಕಾರಣ ಉಂಟು ಮಾಡಲು ಆತನಿಗೆ ಸಾಧ್ಯವಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತಿಳಿಯದಂತೆ ಪೋಡಿ ಕೆಲಸ ಮಾಡಿಸಿಕೊಂಡು 1 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸಲು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಡಿ ದಾಖಲೆಗಳನ್ನು ಸತ್ಯಾಂಶ ಗೊತ್ತಾಗುತ್ತದೆ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೋಡಿ ದಾಖಲೆಯನ್ನು ಹಾಜರುಪಡಿಸುವುದಾಗಿ ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ಎಂ.ಆರ್. ಆದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. 2 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವ ಮತ್ತು ಹಕ್ಕು ಇರದ ಕಾರಣ ಅವರಿಗೆ ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಒಳಗೊಂಡಂತೆ 3 ಎಕರೆ 20 ಗುಂಟೆಯಲ್ಲಿ 1 ನೇ ಪ್ರತಿವಾದಿ ಈಗಲೂ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ವ್ಯಾಜ್ಯ

ಕಾರಣ ಇಲ್ಲದೇ ಇರುವುದರಿಂದ ನನಗೆ ಯಾವುದೇ ನಷ್ಟ ಆಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**2** ನೇ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.